



ಮೊತ್ತ ವರ್ಗಾವಣೆ ಮಾಡುವುದು) ಮೂಲಕ ಪಿ.ಎಫ್. ನಿಧಿಗೆ ಹೆಚ್ಚಿನ ಹಣ ಹೋಗುವಂತೆ ಮಾಡುವುದು ಕೂಡ ಒಳ್ಳೆಯ ಆಯ್ಕೆ' ಎಂದು ಇಂಡಿಯನ್‌ಮನಿ.ಕಾಂ ಕಂಪನಿಯ ಸಂಸ್ಥಾಪಕ ಸಿ.ಎಸ್. ಸುಧೀರ್ ಅಭಿಪ್ರಾಯ ಹಂಚಿಕೊಂಡರು.

ಚಾರ್ಟರ್ಡ್ ಅಕೌಂಟೆಂಟ್ ಕುಮಾರ್ ಪ್ರಸಾದ್ ಅವರು ಕೂಡ 'ಹೆಚ್ಚಿನ ಪಿಂಚಣಿ ಆಯ್ಕೆಯು ಎಲ್ಲರಿಗೂ ಅಂದುಕೊಂಡಷ್ಟು ಲಾಭದಾಯಕವಾಗಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. 'ಇಪಿಎಸ್‌ನಲ್ಲಿ ತೊಡಗಿಸುವ ಹಣವನ್ನು ಹಿಂಪಡೆಯಲು ಅವಕಾಶವೇ ಇಲ್ಲ. ಆದರೆ ಪಿ.ಎಫ್. ಅಥವಾ ಎನ್‌ಪಿಎಸ್‌ನಲ್ಲಿ ತೊಡಗಿಸಿದ ಹಣವನ್ನು ಹಿಂದಕ್ಕೆ ಪಡೆಯಲು ಅವಕಾಶ ಇದೆ. ಈಗಿನ ಕಾಲಘಟ್ಟದಲ್ಲಿ ಹೆಚ್ಚಿನವರು ತಮ್ಮ ಹಣವನ್ನು ತಮ್ಮ ಇಚ್ಛೆಗೆ ತಕ್ಕಂತೆ ಬಳಸಿಕೊಳ್ಳುವುದನ್ನು ಬಯಸುತ್ತಾರೆ. ಈ ದೃಷ್ಟಿಕೋನದಿಂದ ನೋಡಿದಾಗ, ಹೊಸ ಆಯ್ಕೆಯು ಅಷ್ಟೇನೂ ಪ್ರಯೋಜನಕಾರಿಯಲ್ಲ' ಎನ್ನುವುದು ಅವರ ಅನಿಸಿಕೆ. ನೌಕರ 10 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಸೇವೆಯಲ್ಲಿ ಇದ್ದರೆ ಇಪಿಎಸ್ ಹಣ ಹಿಂಪಡೆಯಲು ಆಗುವುದಿಲ್ಲ.

'ಹಣ ಕೈಯಲ್ಲಿದ್ದರೆ ಖರ್ಚಾಗಿಬಿಡುತ್ತದೆ, ಬೇರೆ ಯಾರಾದರೂ ಅದನ್ನು ಪಡೆದುಕೊಳ್ಳಬಹುದು ಎಂಬ ಸ್ಥಿತಿಯಲ್ಲಿ ಇರುವವರು ಇಪಿಎಸ್‌ಗೆ ಹೆಚ್ಚಿನ ಮೊತ್ತ ವರ್ಗಾಯಿಸಬಹುದು. ನಿಶ್ಚಿತವಾದ ಪಿಂಚಣಿ ಬಂದೇ ಬರುತ್ತದೆ. ಆದರೆ, ತೊಡಗಿಸಿದ ಹಣಕ್ಕೆ ಹೆಚ್ಚಿನ ಲಾಭ ಅಥವಾ ಬಡ್ಡಿ ಸಿಗಬೇಕು ಎನ್ನುವವರಿಗೆ ಇದು ಒಳ್ಳೆಯ ಆಯ್ಕೆಯಲ್ಲ' ಎಂದು ಕುಮಾರ್ ಪ್ರಸಾದ್ ಹೇಳಿದರು.

60 ವರ್ಷ ಪೂರ್ಣಗೊಳ್ಳುವವರೆಗೆ ಉದ್ಯೋಗದಲ್ಲಿ ಮುಂದುವರಿಯಲೇಬೇಕು ಎಂಬ ಬಯಕೆ ಎಲ್ಲರಲ್ಲಿಯೂ ಇರುತ್ತದೆ ಎನ್ನಲಾಗದು. ಯುವಕರಲ್ಲಿ ಹಲವರು ಬೇಗನೆ ನಿವೃತ್ತಿ ಪಡೆದು ತಮ್ಮ ಇಷ್ಟದ ಕೆಲಸವನ್ನು ಮಾತ್ರ ಮಾಡಿಕೊಂಡು ಇರುವುದನ್ನು ಬಯಸುತ್ತಿದ್ದಾರೆ. ಇಂಥವರಿಗೆ ಕೂಡ ಇಪಿಎಸ್ ಅಡಿ ಹೆಚ್ಚಿನ ಪಿಂಚಣಿಗೆ ಆಯ್ಕೆ ಮಾಡಿಕೊಳ್ಳುವುದು ಆಕರ್ಷಕವಾಗಲಿಕ್ಕಿಲ್ಲ. 40ನೆಯ ವಯಸ್ಸಿಗೆ ಅಥವಾ 45 ವಯಸ್ಸಿಗೆ ನಿವೃತ್ತಿಯಾಗಲು ಬಯಸುತ್ತಿರುವವರು, ಇಪಿಎಸ್ ಯೋಜನೆಯಿಂದ ಪಿಂಚಣಿ ಪಡೆಯಲು ಸಾಮಾನ್ಯವಾಗಿ 58ನೆಯ ವಯಸ್ಸಿನವರೆಗೆ ಕಾಯಬೇಕು. ಅಲ್ಲಿಯವರೆಗೆ ಅವರ ಹಣಕ್ಕೆ ಬಡ್ಡಿ ಸಿಗುವುದಿಲ್ಲ ಎಂಬುದು ಗಮನದಲ್ಲಿರಬೇಕು.

45ನೆಯ ವಯಸ್ಸಿಗೆ ನಿವೃತ್ತಿ ಪಡೆದವರಿಗೆ ಮೂಲವೇತನವು ಹೆಚ್ಚು ಇಲ್ಲದಿದ್ದರೆ, ಸಿಗುವ ಪಿಂಚಣಿ ಮೊತ್ತವೂ ಹೆಚ್ಚಿರುವುದಿಲ್ಲ. ಬೇಗ ನಿವೃತ್ತಿ ಪಡೆಯಲು ಬಯಸುವವರು ಹೆಚ್ಚಿನ ಬಡ್ಡಿ ನೀಡುವ ಅಥವಾ ಹೆಚ್ಚಿನ ಲಾಭಾಂಶ ತಂದುಕೊಡುವ ಪಿ.ಎಫ್. ಅಥವಾ ಈಕ್ವಿಟಿ ಹೂಡಿಕೆಗಳನ್ನು ಪರಿಗಣಿಸುವ ಬಗ್ಗೆ ಯೋಚಿಸಬಹುದು.

ಪ್ರತಿಕ್ರಿಯಿಸಿ: **feedback@sudha.co.in**